# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:– 06–04–2022 ರಂದು ಬೆಳಗ್ಗೆ:– 11.30 ಗಂಟೆಗೆ ಶ್ರೀ. ಶ್ರೀ ಶಿವಕುಮಾರ ಸ್ವಾಮೀಜಿ ಸಾರ್ವಜನಿಕ ಸೇವಾ ಸಂಕೀರ್ಣ ವಾರ್ಡ್ ಸಂಖ್ಯೆ 126 ಮಾರುತಿಮಂದಿರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿ.ಆರ್/35/2020–21/21–09–2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ. ಜಯಶಂಕರ್ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಮಹದೇವಪುರ ವಿಭಾಗ, ಬಿ.ಬಿ.ಎಂ.ಪಿ ರವರನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾದಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿಗಳು ಮತ್ತು ಸದಸ್ಯರು:–**

| ಕ್ರ. ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ನೋಡೆಲ್ ಅಧಿಕಾರಿ: ಶ್ರೀ. ಜಯಶಂಕರ್ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಮಹದೇವಪುರ ವಿಭಾಗ, ಬಿ.ಬಿ.ಎಂ.ಪಿ. | 9741697632 |
| 2 | ಕಾರ್ಯದರ್ಶಿ ಮತ್ತು ಸಂಚಾಲಕರು<br>ಶ್ರೀ. ರವಿರಾಜ್ ಎಸ್. ಪಿ, ಸಹಾಯಕ ಅಭಿಯಂತರರು, ವಾರ್ಡ್ ನಂ.126 | 9980764000 |
| 3 | ಶ್ರೀ. ಮುನೀರ್‌ಪಾಷಾ, BESCOM- Ward no.126, Maruthimandira. | 9449869201 |
| 4 | ಶ್ರೀ. ಲಕ್ಷ್ಮಿ ನರಸಿಂಹಯ್ಯ, ತೋಟಗಾರಿಕೆ ಅಧಿಕಾರಿ, ಚಂದ್ರಾಬಡಾವಣೆ. | 9845257299 |
| 5 | ಶ್ರೀ. ರಂಗದಾಮಯ್ಯ, ಕಾರ್ಯ ನಿರ್ವಾಹಕರು, ಮಾರುತಿಮಂದಿರ. | 9880376090 |
| 6 | ಶ್ರೀ. ರಾಹುಲ್ ರಾಠೋಡ್, AE (BWSSB), ChandraLayout. | 7026266677 |
| 7 | ಶ್ರೀಮತಿ. ಮಾಲತಿ, ಆರೋಗ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಮೂಡಲಪಾಳ್ಯ. | 9632112539 |
| 8 | ಶ್ರೀ. ಹೇಮಾವತಿ, ಎಚ್.ಜಿ, Senior Health Inspector, ChandraLayout. | 9480484746 |
| 9 | ಶ್ರೀ. ಬಾಬು, (TI – W.126) | 9945345090 |
| 10 | ಶ್ರೀ. ರೇವತಿ. ಎಂ. – (RWA – Shivanandanagara)- ಸದಸ್ಯರು | 9741333900 |
| 11 | ಶ್ರೀ. ಶಿವಶಂಕರ್. ಎ. ಎಂ.– (RWA – Vinayaka Layout)- ಸದಸ್ಯರು | 9448055204 |
| 12 | ಶ್ರೀ. ಎ.ಎಸ್.ವಿ. ಪ್ರಸಾದ್ –ಸದಸ್ಯರು. | 8277335854 |
| 13 | ಶ್ರೀ. ಟಿ. ರಾಮು, (RWA – MRCR Layout)- ಸದಸ್ಯರು | 9900709101 |

*****

ದಿನಾಂಕ: 06–04–2022 ರಂದು ಬೆಳಿಗ್ಗೆ 11.30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ಸದಸ್ಯರು ಮತ್ತು ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಚರ್ಚಿಸಲಾದ ವಿಷಯಗಳ ವಿವರಗಳು:–**

1. ಶ್ರೀ. ಸಿ. ವಿ ನಾಗರಾಜ್ (RWA – Canarabank Colony) – ರವರು ಮಾತನಾಡುತ್ತಾ,

- 4ನೇ ಅಡ್ಡರಸ್ತೆ, 5ನೇ ಅಡ್ಡರಸ್ತೆ ಮತ್ತು 9ನೇ ಅಡ್ಡರಸ್ತೆ ಕೆನರಾಬ್ಯಾಂಕ್ ಕಾಲೋನಿಯಲ್ಲಿ ಮರದ ಕೊಂಬೆಗಳು ಮನೆಗಳ ಮೇಲೆ ಹರಡಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಮರದ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.

  **ಕ್ರಮ:** ಈ ಬಗ್ಗೆ ಮಾತನಾಡಿದ ವಾರ್ಡ್ ನೋಡಲ್ ಅಧಿಕಾರಿ ಅರಣ್ಯ ಅಧಿಕಾರಿಗಳಿಗೆ ತಿಳಿಸಿ ಸದರಿ ದೂರನ್ನು ಬಗೆಹರಿಸಲು ಸೂಚಿಸಲಾಯಿತು. ಅದರಂತೆ ಅರಣ್ಯ ಅಧಿಕಾರಿಗಳು ಸದರಿ ಸ್ಥಳಕ್ಕೆ ಭೇಟಿ ನೀಡಿ ಸದರಿ ದೂರನ್ನು ಬಗೆಹರಿಸಲಾಯಿತು.

- 2ನೇ ಅಡ್ಡರಸ್ತೆ ಕೆನರಾಬ್ಯಾಂಕ್ ಕಾಲೋನಿ ಮತ್ತು ಗಣೇಶ ದೇವಸ್ತಾನದ ಮುಂದೆ ಇರುವ ಹೈಮಸ್ಟ್ ಲೈಟ್ ಬರುತ್ತಿಲ್ಲ ಹಾಗೂ ಇದರಲ್ಲಿ ಟೈಂ ಸೆಟ್ ಮಾಡಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.

  **ಕ್ರಮ:** ಈ ಬಗ್ಗೆ ಮಾತನಾಡಿದ ವಾರ್ಡ್ ನೋಡಲ್ ಅಧಿಕಾರಿ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿ ಸದರಿ ದೂರನ್ನು ಬಗೆಹರಿಸಲು ಸೂಚಿಸಲಾಯಿತು.

- ಕೆನರಾಬ್ಯಾಂಕ್ ಕಾಲೋನಿ ಗಣೇಶ ದೇವಸ್ತಾನದ ಬದಿಯಲ್ಲಿ ಸಾರ್ವಜನಿಕರು ಕಸವನ್ನು ಎಸೆಯುತ್ತಿರುವುದಾಗಿ ಕಂಡುಬಂದಿರುತ್ತದೆ ಎಂದು ತಿಳಿಸಿದರು ಹಾಗೂ ಸದರಿ ಕಸವನ್ನು ತೆರವುಗೊಳಿಸಲು ಸೂಚಿಸಲಾಯಿತು.

- ಸೈಟ್ ನಂ.228 ಸಿ.ಎ ಸೈಟ್‌ನಲ್ಲಿ ಕೆನರಾಬ್ಯಾಂಕ್ ಕಾಲೋನಿಯಲ್ಲಿ ಸಾರ್ವಜನಿಕರು ಕಸವನ್ನು ಎಸೆಯುತ್ತಿರುವುದನ್ನು ತಡೆಯಲು ಸೈಟ್‌ನಲ್ಲಿರುವ ಕಸವನ್ನು ತೆರವುಗೊಳಿಸಿ ಆ ಜಾಗವನ್ನು ಸೂಕ್ತವಾಗಿ ಉಪಯೋಗಿಸಿಕೊಳಲ್ಲು ತಿಳಿಸಿದರು. ಹಾಗೂ ಸೈಟ್ ನಂ 116 4ನೇ ಮುಖ್ಯರಸ್ತೆಯಲ್ಲಿಯೂ ಕಸವನ್ನು ತೆರವುಗೊಳಿಸಿಕೊಡಲು ಸೂಚಿಸಿದರು.

  **ಕ್ರಮ:** ಈ ಬಗ್ಗೆ ಮಾತನಾಡಿದ ವಾರ್ಡ್ ನೋಡಲ್ ಅಧಿಕಾರಿ ಕಸ ವಿಲೆವಾರಿ ಮಾಡುವ ಮೇಸ್ತ್ರೀ ಸಂತೋಷ್ ರವರಿಗೆ ತಿಳಿಸಿ ಸದರಿ ಕಸವನ್ನು ತೆರವುಗೊಳಿಸಿಕೊಡಲು ತಿಳಿಸಲಾಯಿತು.

- 2ನೇ ಅಡ್ಡರಸ್ತೆ, ಕೆನರಾಬ್ಯಾಂಕ್ ಕಾಲೋನಿಯಲ್ಲಿ ನೀರು ಬಿಡುವುದು ಸಾಲುತ್ತಿಲ್ಲ ಹಾಗೂ ಬೂಸ್ಟರ್ ಪಂಪ್ ಅಳವಡಿಕೆ ಮಾಡಿ ನೀರನ್ನು ಬಿಡುವಹಾಗೆ ಮಾಡಿಕೊಡಲು ಸಭೆಯಲ್ಲಿ ತಿಳಿಸಿದರು.

  **ಕ್ರಮ:** ಈ ಬಗ್ಗೆ ಮಾತನಾಡಿದ ವಾರ್ಡ್ ನೋಡಲ್ ಅಧಿಕಾರಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಸಿಸ್ಟಂಟ್ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ತಿಳಿಸಿ ಸರಿಪಡಿಸಲು ತಿಳಿಸಿದರು.

- ಕೆನರಾಬ್ಯಾಂಕ್ ಕಾಲೋನಿಯ ಸುತ್ತಮುತ್ತಲು ಡಾಂಬರೀಕರಣ ಮಾಡಲು ಮತ್ತು ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಲಾಯಿತು.

  **ಕ್ರಮ:** ವಾರ್ಡ್ ಅಧಿಕಾರಿಗಳು ಮಾತನಾಡುತ್ತಾ ಕೆನರಾಬ್ಯಾಂಕ್ ಕಾಲೋನಿಯಲ್ಲಿ ಈಗಾಗಲೇ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಮುಗಿಸಿದ್ದು ರಸ್ತೆ ಗುಂಡಿಗಳು ಇಲ್ಲ ಎಂದು ಸಭೆಯಲ್ಲಿ ತಿಳಿಸಿದರು. ಕೆನರಾಬ್ಯಾಂಕ್ ಕಾಲೋನಿಯ ಸುತ್ತಮುತ್ತಲು ಡಾಂಬರೀಕರಣ ಮಾಡಲು ಮೇಲಿನ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಯಿತು.

ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧ ಪಟ್ಟ ಇಲಾಖೆಗೆ ತಿಳಿಸಲು ನೋಡೆಲ್ ಅಧಿಕಾರಿಗಳು ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ನಂ.126 ರವರಿಗೆ ಸೂಚಿಸಲಾಯಿತು.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಂಖ್ಯೆ.126

ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ.126

<u>ಪ್ರತಿಯನ್ನು:</u>

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2) ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4) ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
5) ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
6) ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.